## ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1194 |
| 2 | ಸದಸ್ಯರ ಹೆಸರು | : | ಶ್ರೀ ಬಿ.ಕೆ. ಹರಿಪ್ರಸಾದ್ (ವಿಧಾನಸಭೆಯಿಂದ ಚುನಾಯಿತರಾದವರು) |
| 3 | ಉತ್ತರಿಸುವ ದಿನಾಂಕ | : | 23-12-2021 |
| 4 | ಉತ್ತರಿಸುವವರು | : | ಮುಖ್ಯಮಂತ್ರಿಗಳು |

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಅ | ಬೆಂಗಳೂರು ನಗರದ ಹೆಚ್.ಎಸ್.ಆರ್. ಬಡಾವಣೆಯ 2ನೇ ಸೆಕ್ಟರ್‌ನ 19ನೇ ಮುಖ್ಯರಸ್ತೆ ಹಾಗೂ 17ನೇ ಅಡ್ಡರಸ್ತೆಗೆ ತಾಗಿಕೊಂಡಿರುವ ಬೆಂಗಳೂರು ದಕ್ಷಿಣ ತಾಲ್ಲೂಕು, ಬೇಗೂರು ಹೋಬಳಿ, ಹರಳುಕುಂಟೆ ಸರ್ವೆ ನಂ.64ರ ಪೈಕಿ ಗೋಮಾಳ 6 ಎಕರೆ ಹಾಗೂ ಸರ್ವೆ ನಂ.1ರಲ್ಲಿ 1.00 ಎಕರೆ ಒಟ್ಟು 7.00 ಎಕರೆ ಪ್ರದೇಶ ಸಾರ್ವಜನಿಕ ಉಪಯೋಗಕ್ಕಾಗಿ ಬಿ.ಡಿ.ಎ ಜಮೀನು ಮೀಸಲಿಡಲಾಗಿದ್ದು, ಬಿ.ಡಿ.ಎ ಮಾಸ್ಟರ್ ಪ್ಲಾನ್ R.M.P ಹಾಗೂ C.D.P 2015ರ ಪ್ರಕಾರ ಮೀಸಲಿಟ್ಟ ಉದ್ದೇಶದ ಹೊರತಾಗಿ ಅನ್ಯ ಉದ್ದೇಶಗಳಿಗೆ ಬಳಸಲು ಅವಕಾಶವಿರುವುದಿಲ್ಲ. ಆದಾಗ್ಯೂ, ಸದರಿ ಜಾಗವನ್ನು ಸುಮಾರು 140 ಕೋಟಿ ವೆಚ್ಚದಲ್ಲಿ ಕ್ರಿಕೆಟ್ ಸ್ಟೇಡಿಯಂ ನಿರ್ಮಾಣ ಮಾಡುತ್ತಿದ್ದು, ಇದು ಸರ್ಕಾರದ ಗಮನಕ್ಕೆ ಬಂದಿದೆಯೇ? (ಸಂಪೂರ್ಣ ಮಾಹಿತಿ ಒದಗಿಸುವುದು) | ಬಂದಿರುತ್ತದೆ.<br><br>ಹೆಚ್.ಎಸ್.ಆರ್. ಬಡಾವಣೆಯ 2ನೇ ಸೆಕ್ಟರ್‌ನ 19ನೇ ಮುಖ್ಯರಸ್ತೆ, ಹಾಗೂ 17ನೇ ಅಡ್ಡರಸ್ತೆಗೆ ತಾಗಿಕೊಂಡಿರುವ ಸುಮಾರು 7 ಎಕರೆ 19 ಗುಂಟೆ ವಿಸ್ತೀರ್ಣದ ಜಾಗವನ್ನು ಯುವ ಸಬಲೀಕಾರಣ ಮತ್ತು ಕ್ರೀಡಾ ಇಲಾಖೆಗೆ ಹಸ್ತಾಂತರಿಸಿರುವ ಸರ್ಕಾರದ ಪತ್ರದ ಸಂಖ್ಯೆ: ನ.ಅ.ಇ 396/ಬೆಂಅಸೆ/2018 ದಿನಾಂಕ: 04.01.2019 ಅನ್ನು ಹಿಂಪಡೆದು, ಸದರಿ ಪ್ರದೇಶದಲ್ಲಿ ಸ್ಟೇಡಿಯಂ ನಿರ್ಮಾಣ ಮತ್ತು ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ದಿನಾಂಕ: 18.09.2019ರ ಸಚಿವ ಸಂಪುಟದ ವಿಷಯದ ಸಂಖ್ಯೆ: ಸಿ 533/2019ರನ್ವಯ ಸಚಿವ ಸಂಪುಟದ ಅನುಮೋದನೆ ಪಡೆದು ಸರ್ಕಾರದ ಅದೇಶ ಸಂಖ್ಯೆ: ನಅಇ 375 ಎಂಎನ್‌ವೈ 2018, ದಿನಾಂಕ: 20.09.2019 ರಂತೆ ಅನುಮೋದಿಸಿರುವುದರಿಂದ ಸುಮಾರು ರೂ.40.25 ಕೋಟಿಗಳ ವಿವಿಧ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ ವಿವರಗಳನ್ನು **ಅನುಬಂಧ**ದಲ್ಲಿ ನೀಡಿದೆ. |
| ಆ | ಕ್ರಿಕೆಟ್ ಸ್ಟೇಡಿಯಂಗೆ ಯಾವುದಾದರೂ ಮನವಿ ಸಲ್ಲಿಕೆಯಾಗಿದೆಯೇ (ವಿವರ ಒದಗಿಸುವುದು) ಅಲ್ಲದೆ ಕ್ರಿಕೆಟ್ ಆಡುವಂತ ವಿದ್ಯಾರ್ಥಿ ಸಮೂಹ ಸದರಿ ಭಾಗದಲ್ಲಿ ಹೆಚ್ಚಾಗಿ ಇಲ್ಲದಿದ್ದಾಗಿಯೂ ಸದರಿ ಜಾಗವನ್ನು ಅಗತ್ಯ ಉದ್ದೇಶಕ್ಕೆ ಬಳಸದೆ ಕ್ರಿಕೆಟ್ ಸ್ಟೇಡಿಯಂ ನಿರ್ಮಾಣ ಮಾಡಲು ಹೊರಟಿರುವುದು ಸರ್ಕಾರದ ಹಣ ವೆಚ್ಚವಾಗುತ್ತಿದ್ದು ಅನಾವಶ್ಯಕ ಖರ್ಚಿಗೆ ಎಡೆಮಾಡಿಕೊಟ್ಟಂತೆ ಅಲ್ಲದೆ ಭ್ರಷ್ಟಚಾರಕ್ಕೆ ನಿರ್ಮಾಣ ರೂಪದಲ್ಲಿ ಎಡೆಮಾಡಿಕೊಟ್ಟಂತೆ ಆಗುವುದಿಲ್ಲವೇ; ಈ ಕುರಿತು ಸರ್ಕಾರ | ಸ್ಥಳೀಯ ವಿಧಾನ ಸಭಾ ಸದಸ್ಯರು ಸಾರ್ವಜನಿಕರ ಅನುಕೂಲಕ್ಕಾಗಿ ಕ್ರೀಡಾಂಗಣ ಅಭಿವೃದ್ಧಿ ಪಡಿಸಲು ಕೋರಿರುತ್ತಾರೆ. ಸದರಿ ಕ್ರೀಡಾಂಗಣವನ್ನು ಸ್ಥಳಿಯ ಸಾರ್ವಜನಿಕರಿಗೆ ಅನುಕೂಲವಾಗುವಂತೆ, ಕ್ರಿಕೆಟ್, ವಾಲಿಬಾಲ್, ಬ್ಯಾಸ್ಕೆಟ್ ಬಾಲ್ ಮತ್ತು ಕಬ್ಬಡಿ ಇತ್ಯಾದಿ ಕ್ರೀಡೆಗಳನ್ನು ಆಡುವ ಸೌಲಭ್ಯವುಳ್ಳ ಮೈದಾನವನ್ನು (Court) ನಿರ್ಮಾಣ ಮಾಡಲು ಅನುವು ಮಾಡಿಕೊಳ್ಳಲಾಗಿರುತ್ತದೆ. |

**ಸಂಖ್ಯೆ: ನಅಇ 380 ಎಂಎನ್‌ವೈ 2021**

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ

[illegible] ಕ್ರ.ಸಂ: ೧೧೯೪ ಕ್ಕೆ ಸಂಬಂಧ.

## BRUHAT BENGALURU MAHANAGARA PALIKE, BOMMANAHALLI ZONE

| SHRI. ATAL BIHARI VAJPAYEE INTERNATIONAL STADIUM @ HSR LAYOUT, BOMMANAHALLI. | | |
|---|---|---|
| Sl No. | Name Of Work | Est Cost In Lakhs |
| 1 | Improvements and maintenance of general Public Toilets Bommanahalli Constituency | 75.00 |
| 2 | Providing drinking water facilities and other allied works in ward no 174 HSR Layout | 125.00 |
| 3 | Improvements to Parks and Play ground in HSR Layout in ward no 174 | 325.00 |
| 4 | Development works at Sri. Atal Bhihari Vijapai Stadium HSR Layout 19th main apposite to Siradi Sayi baba temple in Ward No. 174 HSR Layout. | 500.00 |
| 5 | Development of HSR Park Play Ground in Bommanahalli assembly Constituenct | 1000.00 |
| 6 | Further Development of HSR Layout Play Ground in Ward no. 174 HSR Layout | 500.00 |
| 7 | Development of HSR Layout play grounds ward no. 174 | 500.00 |
| 8 | Development of HSR Layout Play Ground ward no. 174 | 500.00 |
| 9 | Construction of stadium and improvements to existing play ground in HSR Layout of ward No: 174 | 500.00 |
| | **GRAND TOTAL** | **4025.00** |

Chief Engineer
Bommanahalli zone

1